''ಸಾಹೇಬರೆ ನಾನೇನು ಈ ಮನೆಯವಳಲ್ಲ, ಏನಲ್ಲ. ನನಗೆ ಸಾಹೇಬರು ಆಸ್ತಿ ಬರೆದಿದ್ದಾರೆ ಅಂತಾನೂ ಗೊತ್ತಿಲ್ಲ. ಆ ಹಾಲಿನವ ಹೇಳಿದ ಎರಡು ಕೂಗುಗಳು ನಡೆಯುವಾಗಲೂ ನಾನು ಹಾಲ್‌ನಲ್ಲಿಯೇ ಇದ್ದೆ. ನೀವು ನನ್ನ ಮೇಲೂ ಅನುಮಾನ ಪಡ್ತಿದ್ದೀರಾ? ಅಲ್ಲಿ ಇಲ್ಲಿ ಕೆಲಸ ಮಾಡಿಕೊಂಡು ಬದುಕುವ ನಮಗ್ಯಾಕೆ ಸ್ವಾಮಿ ಇದೆಲ್ಲ" ಎಂದು ಜೋರಾಗಿ ಅಳಲು ಪ್ರಾರಂಭಿಸಿದಳು.

"ನಿಲ್ಲಿಸಮ್ಮ ಅಳು. ನಿನ್ನ ಮೇಲೆ ಅನುಮಾನ ಬರಕ್ಕೆ ಕಾರಣ ನೀನು ಉತ್ತರ ಕರ್ನಾಟಕದ ಭಾಷೆ ಮಾತಾಡಿದ್ದು. ಮೊದಲು ನೀನು ಧಣಿ ಎಂದು ಬಳಸಿದೆ. ಅದು ಈ ಭಾಗದಲ್ಲಿ ಬಳಕೆ ಇಲ್ಲ. ಆದರೆ ಮೊದಲು ನೀನು ಮಂಡ್ಯದವಳು ಎಂದು ಹೇಳಿದೆ. ನಂತರ ಸರಿಪಡಿಸಿಕೊಂಡು ಸಾಹೇಬರೆ ಎಂದು ಹೇಳಲು ಶುರುಮಾಡಿದೆ. ಹೇಳು ಎಲ್ಲಿಯವಳು ನೀನು? ನನಗೆ ಗೊತ್ತು ನೀನು ಹೊರಗೆ ಕಾಣುವಷ್ಟು ಮುಗ್ಧೆ ಅಲ್ಲ'' ಎಂದು ನಾಗರಾಜಯ್ಯನ ಧ್ವನಿ ಚೂಪಾಯಿತು. ಅವನ ಅಬ್ಬರ ನೋಡಿ ಇನ್ನಷ್ಟು ಹೆದರಿದಳು ವಿಶಾಲಾಕ್ಷಮ್ಮ.

**ಅವನ ಮಾತುಗಳಿಗೂ ತನಗೂ ಸಂಬಂಧವೇ ಇಲ್ಲ ಎಂಬಂತೆ ನಾಗರಾಜಯ್ಯ "ಫೋನ್ ಮಾಡಿ ಲೇಡಿ ಪೊಲೀಸ್ ಕರೆಸಿರಿ. ಈ ಹೆಂಗಸರನ್ನೂ ಚೆಕ್ ಮಾಡಬೇಕು. ಯಾರಿಗಾದರೂ ಎಲ್ಲಿಯಾದರೂ ಹೊಡೆತದ ಗಾಯ ಏನಾದರೂ ಆಗಿದೆಯಾ ಅಂತ..."**

ನಾಗರಾಜಯ್ಯನ ಮಾತು ತಡೆಯುತ್ತ ಲಾಯರ್ ನಾಗಭೂಷಣ ಖಾರವಾಗಿ ನುಡಿದ: "ಇನ್‌ಸ್ಪೆಕ್ಟರ್ ಹದ್ದು ಮೀರಿ ಮಾತನಾಡುತ್ತಿದ್ದೀರಿ... ಅಮಾಯಕರನ್ನು ಹೆದರಿಸಿ ಹೇಳಿಕೆ ಪಡೆದುಕೊಳ್ಳಲು ಹೊರಟಿದ್ದೀರಿ..."

"ಲಾಯರ್ ಸಾರ್, ಈ ವಿಲ್ ಬಗ್ಗೆ ನಿಮಗೆ ಮಾತ್ರ ತಿಳಿದಿತ್ತು ಹಾಗೂ ಅದನ್ನು ಬದಲಾಯಿಸಲು ಹೊರಟಿದ್ದಾರೆ ಎಂದು ನಿಮಗೆ ತಿಳಿದಿತ್ತು. ನೀವೇ ಯಾಕೆ ಈ ವಿಶಾಲಾಕ್ಷಮ್ಮ ಅಥವಾ ರಜನಿ ಜೊತೆ ಸೇರಿರಬಾರದು. ನಿಮ್ಮ ವರ್ತನೆ ಅನುಮಾನ ಅಂತೂ ತರುತ್ತಿದೆ" ಎಂದ ಇನ್‌ಸ್ಪೆಕ್ಟರ್. ಲಾಯರ್ ಮತ್ತೆ ಮಾತು ಮುಂದುವರೆಸಲಿಲ್ಲ.

"ಸಾರ್ ಯಾರೋ ಕೊಲೆಗಾರ ಬಂದು ಕೊಲೆ ಮಾಡಿ... ವಿಶಾಲಾಕ್ಷಮ್ಮ ಹಾಲು ಹಾಕಿಸಿ ಕೊಂಡು ಒಳಬಂದಾಗ ಯಾಕೆ ಓಡಿ ಹೋಗಿರಬಾರದು. ಅಪಾದನೆ ಮಾಡುವ ಮೊದಲು ಯೋಚಿಸಿ ಮಾತಾಡಿ" ಸುನೀಲ್ ತುಸು ಖಾರವಾಗಿ ನುಡಿದ.

ಅವನ ಮಾತುಗಳು ಕೇಳಿಸಲೇ ಇಲ್ಲವೇನೋ ಎಂಬಂತೆ ನಾಗರಾಜಯ್ಯ "ಕೊಲೆ ಆದ ಸಮಯದಲ್ಲಿ ಎರಡು ಕೂಗು ಕೇಳಿ ಬಂದಿದೆ. ಅದೂ ಹೊರಗೂ ಕೇಳಿದೆ. ಆ ಎರಡು ಕೂಗಿನಲ್ಲಿ ಒಂದು ವಿಶ್ವನಾಥಯ್ಯ ಅವರದು ಎಂದುಕೊಂಡರೆ ಎರಡನೇಯ ಕೂಗು ಯಾರದ್ದು? ಯಾಕೆ ಕೂಗಿದ್ದು? ಎನ್ನುವುದೇ ನನ್ನ ಪ್ರಶ್ನೆ. ಗುಂಡು ಬಿದ್ದ ಜಾಗ ನೋಡಿದರೆ ತಕ್ಷಣ ಪ್ರಾಣ ಹೋಗಿಲ್ಲ. ಒಂದೆರಡು ನಿಮಿಷದ ನಂತರ ಹೋಗಿದೆ. ಹಾಗಾದರೆ ಮೊದಲ ಕೂಗು ವಿಶ್ವನಾಥ ಅವರದ್ದು ಇರಲಿಕ್ಕಿಲ್ಲ. ಅಲ್ಲವೇ ಎಂದು ತನ್ನ ಫೊರೆನ್ಸಿಕ್‌ನವನ ಕಡೆ ತಿರುಗಿದ. ಅವನ ಮಾತುಗಳಿಗೆ ತಲೆ